ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿ ಮಾತಿನ ಉತ್ತರಗಳು

ಶಿರಾ ಪಟ್ಟಣದಲ್ಲಿ ಕೊಳಚೆ ನಿರ್ಮೂಲನೆ

೪೩(೯) ಶ್ರೀ ಪಿ. ಮೂಡ್ಲೇಗೌಡ (ಶಿರಾ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ: —

(ಅ) ಶಿರಾ ನಗರದಲ್ಲಿ ಕೊಳಚೆ ನಿರ್ಮೂಲನ ವಿಚಾರದಲ್ಲಿ ಸರ್ಕಾರದವರು ಯಾವ ಕಾರ್ಯಕ್ರಮಗಳನ್ನು ಕೈಗೆ ಗೊಂಡಿದ್ದಾರೆ?

(ಆ) ಶೀರ ಇಕ್ಕಟ್ಟಾದ ಕೊಳಚೆ ಪ್ರದೇಶಗಳಲ್ಲಿನ ನಾಗರೀಕರಿಗೆ ಬೇರೆ ಕಡೆ ವಸತಿ ಗೃಹಗಳ ನಿರ್ಮಾಣ ಮಾಡಲು ಸರ್ಕಾರ ಯೋಚಿಸಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಏನು ಕ್ರಮ ತೆಗೆದು ಕೊಳ್ಳಲಾಗಿದೆ?

(ಇ) ಶಿರಾ ನಗರಕ್ಕೆ ಕುಡಿಯುವ ನೀರಿನ ಸರಬರಾಜಿಗಾಗಿ ಉದ್ದೇಶಿಸಿರುವ ಯೋಜನೆಯನ್ನು ಈ ಸಾಲಿನಿಂದಲೇ ಪ್ರಾರಂಭಿಸುತ್ತೀರಾ ಹಾಗಾದರೆ ಈ ಬಗ್ಗೆ ಸರ್ಕಾರದವರ ನಿಲುವೇನು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು).—

(ಅ) ಶಿರಾ ಪುರಸಭೆಯ ಪರಿಮಿತಿಯಲ್ಲಿ ೫ ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆ. ಇವುಗಳನ್ನು ಕೊಳಚೆ ಪ್ರದೇಶವೆಂದು ಘೋಷಿಸುವ ವಿಚಾರವು ಪರಿಶೀಲನೆಯಲ್ಲಿದೆ. ಇವುಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಿದಲ್ಲಿ ಈ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುವುದು.

(ಆ) ಈ ಬಗ್ಗೆ ಶಿರಾ ಪುರಸಭೆಗೆ ಖಾಲಿ ಜಮೀನು ನೀಡುವಂತೆ ಕೋರಲಾಗಿದೆ. ಪುರಸಭೆಯು ಸೂಕ್ತವಾದ ಖಾಲಿ ಜಮೀನನ್ನು ನೀಡಿದಲ್ಲಿ ವಸತಿ ಗೃಹಗಳನ್ನು ಕಟ್ಟುವುದರ ಬಗ್ಗೆ ಪರಿಶೀಲಿಸಲಾಗುವುದು.

(ಇ) ಶಿರಾ ನಗರಕ್ಕೆ ನೀರು ಒದಗಿಸುವ ೯೫ ಲಕ್ಷ ರೂಪಾಯಿಗಳ ಒಂದು ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಮೂಡ್ಲೇಗೌಡ (ಶಿರಾ).—ಸನ್ಮಾನ್ಯ ಅಧ್ಯಕ್ಷರೆ. ಶಿರಾ ನಗರದಲ್ಲಿ ಸುಮಾರು ೩೦ ಸಾವಿರ ಪ್ರಜಾಸಂಖ್ಯೆ ಇದ್ದು ಅದರಲ್ಲಿ ೭–೮ ಸಾವಿರ ಬೀಡಿ ಕಾರ್ಮಿಕರಿದ್ದಾರೆ. ಅವರು ಇಕ್ಕಟ್ಟಾದ ಪ್ರದೇಶದಲ್ಲಿ ವಾಸ ಮಾಡುತ್ತಿದ್ದು ಕ್ಷಯರೋಗಕ್ಕೆ ತುತ್ತಾಗುತ್ತಿದ್ದಾರೆ. ಆದುದರಿಂದ ಈ ವರ್ಷದಲ್ಲಿ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ? ಹಾಗೂ ಶಿರಾ ಪುರಸಭೆಯ ವ್ಯಾಪ್ತಿಯಲ್ಲಿ ಖಾಲಿ ನಿವೇಶನ ಜಾಸ್ತಿ ಇರುವುದಿಲ್ಲ. ಆದುದರಿಂದ ಶಿರಾ ನಗರದಲ್ಲಿ ೫–೬ ಸಾವಿರ ನಿವೇಶನಗಳನ್ನು ಮಾಡಿ ಬಡವರಿಗೆ ಹಂಚಿಕೆ ಮಾಡಿ ಮನೆ ಕಟ್ಟಿಕೊಳ್ಳಲಿಕ್ಕೆ ವ್ಯವಸ್ಥೆ ಮಾಡುತ್ತೀರಾ? ಮತ್ತೆ ಮಾನ್ಯ ಮುಖ್ಯ ಮಂತ್ರಿಗಳಿಗೂ ಮತ್ತು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳಿಗೂ ಶಿರಾ ನಗರದಲ್ಲಿ ಕುಡಿಯುವ ನೀರಿನ ಅಭಾವ ಪರಿಸ್ಥಿತಿ ಇರುವುದು ಗೊತ್ತಿರುತ್ತದೆ. ಅವರ ಪ್ರವಾಸ ಕಾಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೂ ಮತ್ತು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳಿಗೂ ನಾಗರೀಕರು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ೧೯೮೩–೪ರಲ್ಲಿ ನೀರು ಸರಬರಾಜು ಮಾಡುತ್ತೇವೆ ಎಂದು ತಾವು ಆಶ್ವಾಸನೆ ಕೊಟ್ಟಿದ್ದೀರಿ. ಶಿರಾ ನಗರಕ್ಕೆ ನೀರು ಒದಗಿಸಲು ೯೫ ಲಕ್ಷ ರೂಪಾಯಿಗಳ ಅಂದಾಜು ತಯಾರಾಗಿದ್ದು ಅದು ಇನ್ನೂ ಕಾರ್ಯಗತವಾಗಿಲ್ಲ. ಅದು ಆಗಬೇಕಾದರೆ ನಿಧಾನವಾಗುತ್ತದೆ. ಆದುದರಿಂದ ತುರ್ತಾಗಿ ೧೫ ಲಕ್ಷ ರೂಪಾಯಿಗಳನ್ನಾದರೂ ಕೊಟ್ಟು ನೀರು ಸರಬರಾಜು ಮಾಡಿಕೊಡುತ್ತೀರಾ?

ಶ್ರೀ ಎಂ. ಚಂದ್ರಶೇಖರ್.—ಶಿರಾ ನಗರದಲ್ಲಿ ೫ ಕೊಳಚೆ ಪ್ರದೇಶಗಳು ಇವೆ. ದಿನಾಂಕ ೨೮ನೇ ಜನವರಿ ೧೯೮೩ರಲ್ಲಿ ಸ್ಥಳ ಪರೀಕ್ಷೆ ಮಾಡಿ ಬಂದು ಆದಮೇಲೆ ೨೫ನೇ ಆಗಸ್ಟ್ ೧೯೮೩ರಲ್ಲಿ

ನೋಟಿಫೈ ಮಾಡಲಿಕ್ಕೆ ಕಳಿಸಿದ್ದಾರೆ. ಅದನ್ನು ಆದಷ್ಟು ಬೇಗ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಅದು ಆದಮೇಲೆ ಅಭಿವೃದ್ಧಿ ಕಾರ್ಯಗಳನ್ನು ತಾನೇತಾನಾಗಿ ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ, ನೀರಿನ ವಿಷಯದಲ್ಲಿ ಹೇಳುವುದಾದರೆ ಅಲ್ಲಿ ಏನಿದ್ದರೂ ಬೋರ್‌ವೆಲ್ ಮುಖಾಂತರ ಮಾತ್ರ ನೀರು ಸರಬರಾಜು ಮಾಡಬಹುದು. ಹೋದವರ್ಷ ಆ ಪ್ರದೇಶದಲ್ಲಿ ಅಭಾವ ಪರಿಸ್ಥಿತಿ ಕಾಲದಲ್ಲಿ ೧೦ ಕೊಳವೆ ಬಾವಿಗಳನ್ನು ಹಾಕಿಸಿದ್ದಾರೆ. ಹಾಕಿಸಿದರೂ ಕೂಡ ಅದರ ಪ್ರಮಾಣ ಮಾತ್ರ ೧೦೦೦ ಗ್ಯಾಲನ್ ಮೇಲೆ ಹೋಗಿಲ್ಲ. ಇಷ್ಟಾದರೂ ಕೂಡ ನೀರಿನ ಅವಶ್ಯಕತೆ ಇರುವುದು ಗೊತ್ತಿದೆ. ೯೫ ಲಕ್ಷ ರೂಪಾಯಿಗಳ ಯೋಜನೆ ಏನಿದೆ ಅದನ್ನು ಆದಷ್ಟು ಬೇಗ ಪರಿಶೀಲನೆಮಾಡಿ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಮೂಡ್ಲೇಗೌಡ.—ಅಲ್ಲಿ ದಿನಕ್ಕೆ ಒಂದು ಗಂಟೆ ನೀರು ಬಿಡತಕ್ಕ ಪರಿಸ್ಥಿತಿ ಇದೆ. ಅಲ್ಲಿ ನೀರಿನ ಅಭಾವ ಬಹಳ ಹೆಚ್ಚು ಇರುವುದರಿಂದ ೧೦ ಲಕ್ಷ ರೂಪಾಯಿಗಳೆನ್ನಾದರೂ ಕೂಡಲೇ ದೊರಕಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಈ ವರ್ಷದ ಅಭಾವ ಪರಿಸ್ಥಿತಿ ಸಮಯದಲ್ಲೂ ಕೂಡ ಕೆಲವು ಬಾವಿಗಳನ್ನು ತೆಗೆದುಕೊಳ್ಳಬೇಕೆಂದಿದ್ದೇವೆ. ನಿಮ್ಮ ಊರಿನ ಪ್ರದೇಶಗಳಿಗೂ ಕೂಡ ಬೋರ್‌ವೆಲ್ ಮುಖಾಂತರವಾಗಿ ನೀರನ್ನು ಕೊಡಬೇಕಾಗಿದೆ. ಅದಕ್ಕಾಗಿ ಈ ವರ್ಷ ಅಲ್ಲಿ ಕೆಲವು ಬಾವಿಗಳನ್ನು ಹಾಕಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಸಂಕೇಶ್ವರ ಪಟ್ಟಣವು ಟೌನ್ ಪ್ಲಾನಿಂಗ್‌ದಲ್ಲಿ ಅಳವಡಿಸಿ ನೋಟಿಫಿಕೇಷನ್ ಆದ ಬಗ್ಗೆ

೪೪ (೧೧೬) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಂಕೇಶ್ವರ ಪಟ್ಟಣವನ್ನು ಟೌನ್ ಯೋಜನೆಯಲ್ಲಿ ಅಳವಡಿಸಲಿಕ್ಕೆ ತೆಗೆದುಕೊಂಡ ಕ್ರಮವೇನು ?

ಆ) ನೀಲ್‌ನಕ್ಷೆ ತಯಾರಾಗಿ ಇದನ್ನು ಸರಕಾರದಿಂದ ಮಂಜೂರಾತಿ ಕೊಡಲಿಕ್ಕೆ ತಡವಾಗುತ್ತಿರುವ ಬಗ್ಗೆ ಕಾರಣವೇನು ?

ಇ) ಟೌನ್ ಯೋಜನೆ ಪ್ರಕಾರ ಅಧಿಸೂಚನೆ ಹೊರಡಿಸಲು ನಿಶ್ಚಿತಪಡಿಸಿದ ದಿನಾಂಕ ಯಾವುದು ?

ಈ) ನೀಲನಕ್ಷೆ ತಯಾರಾಗಿ ಅಧಿಸೂಚನೆ ಹೊರಡಿಸಿದ ಮೇಲೆ ಕಟ್ಟಡ ಕಟ್ಟಲು ಸರಕಾರಿ ಕಛೇರಿಯಿಂದ ಪೂರ್ವ ಪರವಾನಗಿ ಪಡೆಯಲು ಅವಶ್ಯವಿದೆಯೆ ?

ಉ) ಪರವಾನಿಗೆ ಪಡೆಯದ ಕಟ್ಟಡಗಳ ನಿರ್ವಾಣ ತಡೆಯಲು ಸರಕಾರದವರು ತೆಗೆದುಕೊಳ್ಳುವ ಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು).—

ಅ) ಸಂಕೇಶ್ವರ ಪಟ್ಟಣವನ್ನು ಯೋಜಿಸುವ ಬಗ್ಗೆ ಕರ್ನಾಟಕ ಟೌನ್ ಮತ್ತು ಕಂಟ್ರಿ ಪ್ಲಾನಿಂಗ್ ಆಕ್ಟ್ ೧೯೬೧ರ ಅಡಿಯಲ್ಲಿ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

ಆ) ಸಂಕೇಶ್ವರ ಪಟ್ಟಣಕ್ಕೆ ತಯಾರಿಸುವ ಅಭಿವೃದ್ಧಿ ಯೋಜನೆಯನ್ನು ಕರ್ನಾಟಕ ಟೌನ್ ಮತ್ತು ಕಂಟ್ರಿ ಪ್ಲಾನಿಂಗ್ ಆಕ್ಟ್ ೧೯೬೧ರ ಅಡಿಯಲ್ಲಿ ಮಾಡಿರುವುದಿಲ್ಲ. ಈ ಅಭಿವೃದ್ಧಿ ಯೋಜನೆಯನ್ನು ಸ್ಥಳೀಯ ಪುರಸಭೆಯ ಕೋರಿಕೆಯ ಮೇಲೆ ಅದರ ಮಾರ್ಗದರ್ಶನೆಗಾಗಿ ತಯಾರಿಸಿ ನೀಡಲಾಗಿದೆ.